ಶ್ರೀ ನಿ. ಜೆ. ಮುಕ್ಕಣ್ಣಪ್ಪ.—ಹೆಸರಘಟ್ಟ ಹುಲ್ಲುಗಾವಲು, ನೆಲಮಂಗಲ ಮತ್ತು ಮಾಗಡಿ ತಾಲ್ಲೂಕುಗಳಲ್ಲಿ ತಿಪ್ಪಗೊಂಡನಹಳ್ಳಿ ಜಲಾಶಯದ ನೀರಿನಿಂದಾವೃತವಾದ ಪ್ರದೇಶಗಳಲ್ಲಿ ಯಾವ ಹಕ್ಕಿಗಳಿವೆ ? ಎದನ್ನು ರಿಸರ್ವ್ ಮಾಡಲು ಕಾರಣವೇನು ?

ಶ್ರೀ ಬಿ. ರಾಚಯ್ಯ.—ಜಿಂಕೆ, ಬೆಸಲ, ಹಕ್ಕಿಗಳು ಮುಂತಾದವಿವೆ.

ಶ್ರೀಮತಿ ಬಿ. ಎಸ್. ಸುಬ್ಬಮ್ಮ.—ರೂಲ್ಸ್ ಫ್ರೇಂ ಮಾಡಿ ಕಾನೂನನ್ನು ಜಾರಿಗೆ ತರಲು ಇನ್ನೂ ಎಷ್ಟು ದಿವಸ ಬೇಕು ?

ಶ್ರೀ ಬಿ. ರಾಚಯ್ಯ.—ರೂಲ್ಸ್ ಫ್ರೇಂ ಮಾಡುವುದಕ್ಕೆ ಮುಂಚೆಯೇ ಸೂಕ್ತ ಕ್ರಮ ಕೈಕೊಂಡಿದ್ದೇವೆ. ಲೈಸೆನ್ಸ್ ಕೊಡುವ ಕಡೆ ಚೀಫ್ ಕನ್‌ಸರ್ವೇಟರು ಬರುವವರೆಗೂ ಲೈಸೆನ್ಸ್ ಕೊಡಬಾರದು, ಕೆಲವು ಮುಖ್ಯವಾದ ಪಕ್ಷಿಗಳು ಕಡಿಮೆಯಾಗುತ್ತಿರುವ ಸಂದರ್ಭಗಳಲ್ಲಿ ಅವನ್ನು ಬೇಟೆಯಾಡಲು ಅವಕಾಶ ಕೊಡಬಾರದು ಎಂದು ಮುಂತಾಗಿ ತಿಳಿಸಲಾಗಿದೆ. ರೂಲ್ಸ್ ಮಾಡುವುದು ನಿಧಾನವಾಗಿದ್ದರೂ ಸೂಕ್ತ ಕಾರ್ಯ ಕ್ರಮ ತೆಗೆದುಕೊಳ್ಳುವುದು ನಿಧಾನವಾಗಿಲ್ಲ. ರೂಲ್ಸನ್ನು ಆದಷ್ಟು ಜಾಗ್ರತೆ ಮಾಡುತ್ತೇವೆ.

ಶ್ರೀ ನಿ. ಜೆ. ಮುಕ್ಕಣ್ಣಪ್ಪ.—ನಮ್ಮ ರಾಜ್ಯದಲ್ಲಿ ಹುಲಿಗಳನ್ನು ಕೊಲ್ಲುವುದು ಜಾಸ್ತಿಯಾಗಿ ಅವುಗಳ ಸಂಖ್ಯೆ ಕಡಿಮೆಯಾಗುತ್ತಿರುವುದರಿಂದ ಆ ಬಗ್ಗೆ ಏನಾದರೂ ಕ್ರಮ ತೆಗೆದುಕೊಂಡಿದ್ದೀರಾ ?

ಶ್ರೀ ಬಿ. ರಾಚಯ್ಯ—ಹುಲಿಯನ್ನು ಕದ್ದು ಹೊಡೆಯುವುದಕ್ಕಿಂತ ಫಾಲಿಡಾರ್ ಉಪಯೋಗಿಸಿ ಅವನ್ನು ಕೊಲ್ಲುವುದು ಜಾಸ್ತಿಯಾಗಿದೆ, ಬಂಡೀಪುರ ಫಾರೆಸ್ಟಿನಲ್ಲಿ ಹೀಗೆ ಎರಡು ಹುಲಿಗಳು ಸತ್ತಿವೆ. ಆದುದರಿಂದ ಜನರು ಆ ರೀತಿ ಮಾಡಬಾರದೆಂದು ಮನವಿಮಾಡಲಾಗಿದೆ.

ಶ್ರೀ ಕೆ. ಪಿ. ರೇವಣಸಿದ್ದಪ್ಪ.—ಕತ್ತೆ ಕಿರುಬದ ಹಾವಳಿ ಜಾಸ್ತಿಯಾಗಿ ಜನ ಜಾನುವಾರುಗಳಿಗೆ ತೊಂದರೆಯಾಗುತ್ತಿರುವುದನ್ನು ತಪ್ಪಿಸಲು ಏನು ಕ್ರಮ ತೆಗೆದುಕೊಂಡಿದ್ದೀರಿ ?

ಶ್ರೀ ಬಿ. ರಾಚಯ್ಯ.—ಬಹುಶಃ ಈತೆಗೆ ಅವರ ಸಂಖ್ಯೆ ಕಡಿಮೆಯಾಗಿದೆ.

Production of Fish Fingerlings

*Q.—131. Sri J. P. SARVESH (Serum).—

Will the Government be pleased to state :—

(*a*) the number of fish fingerlings that are produced at Hesaraghatta fish nursery and Tungabhadra fish farm at present ;

(*b*) the number of fish fingerlings that were stocked in the perennial tanks of Gulbarga District during the year 1963-64 and what is the yield during the said period ?

*A.—SRI B. RACHAIAH (Minister for Forests and Fisheries).—

(*a*)	*Hessaraghatta Fish Farm*	*Tungabhadra Fish Farm.*
Hatchlings ...	9,60,700	61,94,000
Fry ...	3,7[illegible],300	8,28,000
Fingerlings ...	1,28,400	1,00,000

(*b*) 54,000 fingerlings of major carps were stocked in eight perennial tanks of Gulbarga District during the year 1963-64.

2,590 kgs. of fish were caught from Sharanabasava tank in Gulbarga by departmental exploitation during 1963-64. The estimated fish production from other tanks is about 20,000 kgs.

Sri J P. SARVESH.—May I know the difference between the Fish Farm and Nursery :

Mr. SPEAKER.—Fish Farm is a bigger farm. Nursery is meant for rearing fry or fingerlings.

† ಶ್ರೀ ಬಿ. ರಾಚಯ್ಯ —ಫಿಷ್ ಫಾರಂ ಎಂದರೆ ದೊಡ್ಡದು, ನರ್ಸರಿ ಚಿಕ್ಕದು.

Sri J. P. SARVESH.—Will the Government propose to start Fish Farm in Gulbarga ?

Sri B. RACHAIAH.—There is a proposal to start Fish Farm at Raichur District In Gulbarga Division.

Collection of Loan Instalments.

*Q.—138. Sri S. V. RAME GOWDA (Malur).—

Will the Government be pleased to state :—

Whether they would issue orders to collect during the year 1966-67 the loan insalments due from the ryots for the years 1965-66 levying only ordinary interest instead of penal interest in view of the scarcity conditions prevailing in the State this year ?

A.—Sri M. V. KRISHNAPPA (Minister for Revenue).—

Whenever loan insalments are postponed on account of scarcity onditions in a particular area, penal interest is not lived. The question of issuing orders in this respect does not arise.

ಶ್ರೀ ಎಸ್. ವಿ. ರಾಮೇಗೌಡ.—ನಮ್ಮ ರಾಜ್ಯದಲ್ಲಿ ಅಭಾವ ಪರಿಸ್ಥಿತಿ ಇದ್ದರೂ ಕೂಡ ಸಾಲದ ಕಂತುಗಳನ್ನು ವಸೂಲು ಮಾಡಬಾರದೆಂದೇಕೆ ಆದೇಶ ಕೊಟ್ಟಿಲ್ಲ ?

ಶ್ರೀ ಎಂ. ವಿ. ಕೃಷ್ಣಪ್ಪ.—ಎಲ್ಲಿ ಬೆಳೆಯಾಗಿಲ್ಲ ಅಲ್ಲಿ ಕಂದಾಯ ವಸೂಲು ಮಾಡಬೇಕಾಗಿಲ್ಲ ಮತ್ತು ಕಂದಾಯದ ರೂಪವಾದ ಬೇರೆ ಬಾಕಿಗಳನ್ನೂ ವಸೂಲು ಮಾಡಬಾರದು ಎಂದು ಜಿಲ್ಲಾಧಿಕಾರಿಗಳಿಗೆ ಬರೆದಿದ್ದೇವೆ. ಅವರಿಗೆ ಆ ಬಗ್ಗೆ ಪೂರ್ಣ ಅಧಿಕಾರವಿದೆ.

ಶ್ರೀ ಎಸ್. ವಿ. ರಾಮೇಗೌಡ.—ಹಾಗೆ ತಾವು ಬರೆದಿರುವುದು- ಬರೆದಿಲ್ಲದಿರುವುದು ಜನರಿಗೆ ಹೇಗೆ ಗೊತ್ತಾಗಬೇಕು ? ಅಧಿಕಾರಿಗಳು ತಮಗೆ ಆರ್ಡರು ಬಂದಿಲ್ಲ ಎಂದು ಹೇಳುತ್ತಾರೆ.

ಶ್ರೀ ಎಂ. ವಿ. ಕೃಷ್ಣಪ್ಪ.—ಬೇಕಾದರೆ ನಾವು ಬರೆದಿರುವ ಪತ್ರದ ಕಾಪಿಯನ್ನು ತಮಗೆ ಕಳುಹಿಸುತ್ತೇನೆ.

ಶ್ರೀ ಜಿ. ವಿ. ಗೌಡ.—ಜಿಲ್ಲಾಧಿಕಾರಿಗಳು ಅಭಾವ ಪ್ರದೇಶದಲ್ಲಿ ತಾವು ಕೊಟ್ಟಿರುವ ಆದೇಶದಂತೆ ನಡೆದುಕೊಳ್ಳುತ್ತಿಲ್ಲ. ಆ ಬಗ್ಗೆ ಸೂಕ್ತ ಕ್ರಮ ಕೈಕೊಳ್ಳುತ್ತೀರಾ ?

ಶ್ರೀ ಎಂ. ವಿ. ಕೃಷ್ಣಪ್ಪ.—ಕಂದಾಯದ ವಸೂಲು ಖಿನ್ನ ಫೆಬ್ರವರಿಯಿಂದ ಪ್ರಾರಂಭವಾಗುವುದು. ನವೆಂಬರು ಮತ್ತು ಡಿಸೆಂಬರು ತಿಂಗಳುಗಳಲ್ಲಿ ಎರಡು ಸಲ ಜಿಲ್ಲಾಧಿಕಾರಿಗಳಿಗೆ ಬರೆದು ತಿಳಿಸಿದ್ದೇವೆ. ಅವರು ಪ್ರವಾಸಮಾಡಿ ಎಲ್ಲಿ ಕಂದಾಯ ವಸೂಲು ಮಾಡುವುದು ಉಚಿತವಲ್ಲವೆಂದು ತೋರುತ್ತದೋ ಅಲ್ಲಿ ಮಾಡಬಾರದೆಂದು ತಿಳಿಸಿದ್ದೇವೆ. ನಾವೇ ತೀರ್ಮಾನ ಮಾಡುವುದಾದರೆ ನಿಧಾನವಾಗಬಹುದು ಎಂದು ಸ್ಥಳೀಯ ಅಧಿಕಾರಿಗಳಿಗೆ ಈ ಅಧಿಕಾರ ಕೊಡಲಾಗಿದೆ. ಜೇಕಾದರೆ

1-30 P.M.

ಮತ್ತೆ ಬರೆದು ತಿಳಿಸುತ್ತೇವೆ. ಕೆಲವು ಕಡೆ ರೈತರು ಕಂದಾಯ ಕಟ್ಟಲು ತೊಂದರೆಯಾಗಿ ತಾಪತ್ರಯವಾಗಿರುವುದರಿಂದ, ನಿಧಾನವಾಗಿ ವಸೂಲುಮಾಡುವಂತೆ ಜಿಲ್ಲಾಧಿಕಾರಿಗಳಿಗೆ